ಆ) ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಿದ ಜಮೀನಿನ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸ್ವಾಧೀನಪಡಿಸಿದ ಜಮೀನಿನ ವಿಸ್ತೀರ್ಣ ಎ–ಗು
1	ಬೆಂಗಳೂರು ನಗರ	1897–28
2	ಬೆಂಗಳೂರು ಗ್ರಾಮಾಂತರ	918–16
3	ಹಾಸನ	1057–24
4	ಕೋಲಾರ	685–33
5	ಮಂಡ್ಯ	722–05
	ಒಟ್ಟು	**5281–26**
	ಅ ಮತ್ತು ಆ ಒಟ್ಟು	**38679–10**

321 ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿ ಒಕ್ಕಲುಗಳ ಅಡಿ ಸ್ಥಳವನ್ನು ಗೇಣಿ ಒಕ್ಕಲುಗಳಿಗೆ ಮಂಜೂರಾತಿ ಮಾಡದಿರಲು ಕಾರಣವೇನು;

ಆ) ಮಂಜೂರಾತಿಗಾಗಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು ಹಾಗೂ ಯಾವಾಗ ಮಾಡಲಾಗುವುದು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಮೂಲಗೇಣಿ ಜಮೀನಿಗೆ ಸಂಬಂಧಿಸಿದಂತೆ ವಕ್ಕಲುಗಳು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ಕಲಂ 48ಎ ಹಾಗೂ 77ಎ ರೀತ್ಯಾ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಭೂ ನ್ಯಾಯ ಮಂಡಳಿಗಳಿಂದ ಈಗಾಗಲೇ ಅಧಿಭೋಗತನದ ಹಕ್ಕನ್ನು ನೀಡಲಾಗಿರುತ್ತದೆ. ಮೂಲಗೇಣಿ ಹಕ್ಕಿನಲ್ಲಿ ಕೃಷಿಯೇತರವಾಗಿ ಉಪಯೋಗಿಸಲ್ಪಡುತ್ತಿರುವ ಜಮೀನಿಗೆ ಸಂಬಂಧಿಸಿದಂತೆ ಪ್ರಕೃತ ಊರ್ಜಿತದಲ್ಲಿರುವ ಭೂ ಸುಧಾರಣಾ ಕಾಯ್ದೆಯಲ್ಲಿ ವಕ್ಕಲುಗಳಿಗೆ ಮಂಜೂರಾತಿ ಉತ್ತರದಿಂದ ನೀಡಲು ಅವಕಾಶವಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.